# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀ ಬಿ.ಎನ್.ಇಟಗಿಮಠ., ಹಿಂದಿನ ಕಾರ್ಯದರ್ಶಿ, ಸೊರಟೂರ ಗ್ರಾಮ ಪಂಚಾಯತಿ, ಗದಗ ತಾಲ್ಲೂಕು ಮತ್ತು ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಕುರಿತು.

**ಓದಲಾಗಿದೆ:**

ನಿಬಂಧಕರು ಎ.ಆರ್.ಇ.–5 ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಅ.ಸ.ಪ.ಸಂ. Compt/UPLOK/BGM-221/2011/ARE-5, ದಿನಾಂಕ:03.01.2017

**ಪ್ರಸ್ತಾವನೆ:**

ಮೇಲೆ ಓದಲಾದ (1) ರಲ್ಲಿನ ನಿಬಂಧಕರು ಎ.ಆರ್.ಇ.–5, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರದ ಸಂಗಡ ಕಳುಹಿಸಿರುವ ಮಾನ್ಯ ಉಪಲೋಕಾಯುಕ್ತರು ದಿನಾಂಕ: 31.12.2016 ರಂದು ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ಸಲ್ಲಿಸಿರುವ ವರದಿಯಲ್ಲಿ ಶ್ರೀ ತಿರಕಪ್ಪ ಗುರುಪಾದಪ್ಪ ಬೋಳನವರ, ಸೊರಟೂರ ಗ್ರಾಮ, ಗದಗ ತಾಲ್ಲೂಕು ಮತ್ತು ಜಿಲ್ಲೆ ರವರು (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು, (1) ಶ್ರೀ ಬಿ.ಎನ್.ಇಟಗಿಮಠ., (2) ಶ್ರೀ ಮುಲ್ಲಾ, (3) ಶ್ರೀ ಒಚಿಟಿ ಬಿ.ಎಲ್., – ಹಿಂದಿನ ಕಾರ್ಯದರ್ಶಿಗಳು, ಸೊರಟೂರ ಗ್ರಾಮ ಪಂಚಾಯತಿ, ಗದಗ ತಾಲ್ಲೂಕು ಮತ್ತು ಜಿಲ್ಲೆ ಮತ್ತು ಶ್ರೀ ಸೋಂಪುರ ಎಂ.ಆರ್., ತೋಟಗಾರಿಕೆ ಇಲಾಖೆ ನೌಕರರು, ಸೊರಟೂರ ಗ್ರಾಮ (ಇನ್ನು ಮುಂದೆ ಎದುರುದಾರರು 1 ರಿಂದ 4 ಎಂದು ಕರೆಯಲ್ಪಡುತ್ತಾರೆ) ಇವರುಗಳ ವಿರುದ್ಧ ದೂರು ಸಲ್ಲಿಸಿ, ಗ್ರಾಮ ಪಂಚಾಯತಿ ಸಭೆಗಳು ಮತ್ತು ಗ್ರಾಮಸಭೆಗಳನ್ನು ನಡೆಸದಿರುವುದು, ಬೋಗಸ್ ಬಿಲ್‌ಗಳನ್ನು ಸೃಷ್ಟಿ ಮಾಡಿರುವುದು, ಅಳತೆ ಪುಸ್ತಕದಲ್ಲಿ ಬೋಗಸ್ ಅಳತೆ ನಮೂದು ಮಾಡಿರುವುದು ಹಾಗೂ ಗ್ರಾಮಸಭೆ ಹಾಗೂ ಸಾಮಾನ್ಯ ಸಭೆಯ ಅನುಮೋದನೆ ಇಲ್ಲದೆ ವಸತಿ ಯೋಜನೆ ಅಡಿ ಫಲಾನುಭವಿಗಳ ಪಟ್ಟಿಯನ್ನು ಸಿದ್ಧಪಡಿಸಿ ಕರ್ತವ್ಯಲೋಪ ಎಸಗಿರುವುದಾಗಿ ಆರೋಪಿಸಿರುತ್ತಾರೆ. ಈ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 9 ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದು, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966ರ ನಿಯಮ 3(1) ರನ್ವಯ ಎದುರುದಾರರು ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡು ಬರುವುದರಿಂದ, ಎದುರುದಾರರಾದ ಶ್ರೀ ಬಿ.ಎನ್.ಇಟಗಿಮಠ., ಹಿಂದಿನ ಕಾರ್ಯದರ್ಶಿ, ಸೊರಟೂರ ಗ್ರಾಮ ಪಂಚಾಯತಿ, ಗದಗ ತಾಲ್ಲೂಕು ಮತ್ತು ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14–ಎ ರಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲು ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತರ ವರದಿಯನ್ನು ಪರಿಶೀಲಿಸಿ, ಎದುರುದಾರರಾದ ಶ್ರೀ ಬಿ.ಎನ್.ಇಟಗಿಮಠ., ಹಿಂದಿನ ಕಾರ್ಯದರ್ಶಿ, ಸೊರಟೂರ ಗ್ರಾಮ ಪಂಚಾಯತಿ, ಗದಗ ತಾಲ್ಲೂಕು ಮತ್ತು ಜಿಲ್ಲೆ ಇವರ ವಿರುದ್ಧ ವಿಚಾರಣೆ ನಡೆಸುವುದು ಸೂಕ್ತವೆಂದು ಭಾವಿಸಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14–ಎ ರನ್ವಯ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 19 ಗ್ರಾಪಂಕಾ 2017, ಬೆಂಗಳೂರು, ದಿನಾಂಕ: 21.01.2017**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಬಿ.ಎನ್.ಇಟಗಿಮಠ., ಹಿಂದಿನ ಕಾರ್ಯದರ್ಶಿ, ಸೊರಟೂರ ಗ್ರಾಮ ಪಂಚಾಯತಿ, ಗದಗ ತಾಲ್ಲೂಕು ಮತ್ತು ಜಿಲ್ಲೆ ಇವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957 ರ ನಿಯಮ 11ರ ಅನುಸಾರ ಇಲಾಖಾ ವಿಚಾರಣೆ ನಡೆಸಲು ಸದರಿ ನಿಯಮಗಳ ನಿಯಮ 14–ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ-8 ರ ಅಡಿ ಸೂಚಿತವಾದ ಯಾವುದಾದರೊಂದು ಅಥವಾ ಹೆಚ್ಚಿನ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ವಿ.ಅರುಣ್ ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ,**

1) ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2) ಮಾನ್ಯ ಉಪಲೋಕಾಯುಕ್ತ ರವರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3) ನಿಬಂಧಕರು ಎ.ಆರ್.ಇ-5, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಗದಗ ಜಿಲ್ಲಾ ಪಂಚಾಯತಿ, ಗದಗ.
5) ಕಾರ್ಯನಿರ್ವಾಹಕ ಅಧಿಕಾರಿ, ಗದಗ ತಾಲ್ಲೂಕು ಪಂಚಾಯತಿ, ಗದಗ.
   (ಸಂಬಂಧಿಸಿದ ನೌಕರರಿಗೆ ಆದೇಶದ ಪ್ರತಿಯನ್ನು ತಲುಪಿಸಿ ಸರ್ಕಾರಕ್ಕೆ ಸ್ವೀಕೃತಿ ನೀಡುವಂತೆ ಕೋರಿದೆ.)
6) ಶ್ರೀ ಬಿ.ಎನ್.ಇಟಗಿಮಠ., ಹಿಂದಿನ ಕಾರ್ಯದರ್ಶಿ, ಸೊರಟೂರ ಗ್ರಾಮ ಪಂಚಾಯತಿ, ಗದಗ ತಾಲ್ಲೂಕು ಮತ್ತು ಜಿಲ್ಲೆ.
7) ಗಣಕಕೋಶ – ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
8) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.